ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಶುಕ್ರವಾರ, ದಿನಾಂಕ: 11ನೇ ಡಿಸೆಂಬರ್, 2020

ವರ್ಗಾವಣೆ/ನಿಯೋಜನೆಗೊಂಡ ಪಿ.ಡಿ.ಓ ರವರು ಕಾರ್ಯ ವರದಿ ಮಾಡಿಕೊಳ್ಳದೆ ಇರುವ ಬಗ್ಗೆ

ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನ ಸಭೆಯಿಂದ ಚುನಾಯಿತರಾದವರು):-

463(549) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ 6 ತಿಂಗಳಿನಿಂದ ಬೀದರ್ ಜಿಲ್ಲೆಯಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ವರ್ಗಾವಣೆ ಮತ್ತು ನಿಯೋಜನೆಗೊಂಡಿರುವ ಪಿ.ಡಿ.ಓ.ಗಳ ಹೆಸರು ಸಹಿತ ವಿವರಗಳನ್ನು ನೀಡುವುದು; ಈ ಪಿ.ಡಿ.ಓ.ಗಳು ವರ್ಗಾವಣೆ/ನಿಯೋಜನೆಗೊಂಡ ಸ್ಥಳದಲ್ಲಿ ಕಾರ್ಯ ವರದಿ ಮಾಡಿಕೊಳ್ಳುವಂತೆ ಹಿರಿಯ ಅಧಿಕಾರಿಗಳ ಸೂಚನೆ ಇದ್ದರೂ ಕಾರ್ಯ ವರದಿ ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಅಂತಹ ಎಷ್ಟು ಜನ ಪಿ.ಡಿ.ಓ.ಗಳು ಈವರೆವಿಗೂ ಕಾರ್ಯ ವರದಿ ಮಾಡಿಕೊಂಡಿರುವುದಿಲ್ಲ; ಇದಕ್ಕೆ ಕಾರಣಗಳೇನು;

(ಇ) ಈ ಪಿ.ಡಿ.ಓ. ಗಳು ತಮ್ಮ ಸ್ಥಳಕ್ಕೆ ವರ್ಗಾವಣೆ /ನಿಯೋಜನೆಗೊಂಡವರಿಗೆ ಅಧಿಕಾರ ಹಸ್ತಾಂತರಿಸದೆ ಸದರಿ ಸ್ಥಳದಲ್ಲಿ ಮುಂದುವರೆದಿರುವುದಲ್ಲದೆ, ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳ ಜೊತೆ ಶಾಮೀಲಾಗಿ ಅಕ್ರಮವಾಗಿ ಖಾತೆಯಿಂದ ಹಣ ಡ್ರಾ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಗ್ರಾಮ ಪಂಚಾಯಿತಿವಾರು ಸಂಪೂರ್ಣ ವಿವರ ನೀಡುವುದು)

(ಈ) ಈ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; ಅವರನ್ನು ಅಮಾನತ್ತುಗೊಳಿಸಲಾಗಿದೆಯೇ?